ಒಪ್ಪಿಗೆ ಸಹ ಪಡೆದಿದೆ, ಅದನ್ನು ಶೀಘ್ರದಲ್ಲಿಯೇ ಸರ್ಕಾರಕ್ಕೆ ಕಳುಹಿಸಿ, ಆದಷ್ಟು ಬೇಗನೆ ಈ ವ್ಯಂದ ನೇಮಕಾತಿ ನಿಯಮಗಳನ್ನು ಪೂರ್ಣಗೊಳಿಸುವುದರಲ್ಲಿ ಇಲಾಖೆ ಕ್ರಮ ಕೈಗೊಳ್ಳುತ್ತದೆ ಎಂದು ತಿಳಿಸುತ್ತೇನೆ.

ಶ್ರೀ ಕೆ. ಎಸ್. ಸೋಮಸುಂದರಂ.— ಅವರಂ ಒದಗಿಸಿರತಕ್ಕ ಅಂಕಿ ಅಂಶಗಳ ಮೇಲೆ ಹೇಳಂವುದಾದರೆ ಪರಿಶಿಷ್ಟ ವರ್ಗದವರು ಹೆಚ್ಚಿನ ರೀತಿಯಲ್ಲಿ ಎಲ್ಲಾ ಫ್ಯಾಕ್ಟರಿಯಲ್ಲಿಯೂ ಇದ್ದಾರೆ, ಅವರಿಂದ ಕೆಲಸವನ್ನು ತೆಗೆದುಕೊಳ್ಳಬೇಕು ಅಂದರೆ, ಉನ್ನತ ಹುದ್ದೆಯಲ್ಲಿರತಕ್ಕ ಅಧಿಕಾರಿಗಳು ಕೂಡ ಪರಿಶಿಷ್ಟ ಜಾತಿಗೆ ಸೇರಿದವರು ಇದ್ದರೆ, ಹೆಚ್ಚಿನ ರೀತಿಯಲ್ಲಿ ಆದರಲ್ಲಿ ಲಾಭ ಗಳಿಕೆಯಾಗುತ್ತದೆ ಎನ್ನುವ ದೃಷ್ಟಿಯಿಂದ ನಾನು ಈ ಮಾತನ್ನು ಹೇಳಂತ್ತಿದ್ದೇನೆ. ಆದ್ದರಿಂದ, ಇದರ ಬಗ್ಗೆ ಮಾನ್ಯ ಸಚಿವರು ಆದ್ಯತೆಯನ್ನು ಕೊಡಬೇಕಂ. ಅನೇಕ ಜನ ಪರಿಶಿಷ್ಟ ಜಾತಿಯವರು ಆದಕ್ಕೆ ಅರ್ಹತೆ ಪಡೆದವರು ಇದ್ದಾರೆ. ಅವರ ಬಗ್ಗೆ ಗಮನಹರಿಸಬೇಕೆಂದು ಮಾನ್ಯ ಮಂತ್ರಿಗಳನ್ನು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಎಸ್. ಆತ್ಮಾನಂದ.— ಮಾನ್ಯ ಸದಸ್ಯರ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ಅರ್ಹರಾದವರಿಗೆ ಶೀಘ್ರವಾಗಿ ಬಡ್ತಿಯನ್ನು ನೀಡಲಾಗುತ್ತದೆ.

ಮಂಡ್ಯ ಜಿಲ್ಲೆಯ ಸಣ್ಣ ಕೈಗಾರಿಕೆಗಳಿಗೆ ಸಹಾಯ ಧನ ನೀಡುವ ಬಗ್ಗೆ

೧೬೪೮. ಶ್ರೀ ಎಂ. ತಮ್ಮಣ್ಣ (ಕೆರಗೋಡು).— ಮಾನ್ಯ ಕೈಗಾರಿಕೆ, ಇಂಧನ ಹಾಗೂ ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮಂಡ್ಯ ಜಿಲ್ಲೆಯಲ್ಲಿ ಸಹಾಯ ಧನಕ್ಕೆ (ಸಬ್ಸಿಡಿ) ಎಷ್ಟು ಸಣ್ಣ ಕೈಗಾರಿಕೆಗಳು ೧೯೮೮-೮೯ ೧೯೮೯-೯೦ ಹಾಗೂ ೧೯೯೦-೯೧ರಲ್ಲಿ ನೊಂದಾಯಿಸಲ್ಪಟ್ಟಿವೆ.

ಆ) ನೊಂದಾಯಿಸಲ್ಪಟ್ಟ ಸಣ್ಣ ಕೈಗಾರಿಕೆಗಳಲ್ಲಿ ಎಷ್ಟಕ್ಕೆ ಸಹಾಯ ಧನ ಮಂಜೂರಾಗಿದೆ;

ಇ) ಇಲ್ಲಿಯವರೆಗೆ ಸಹಾಯ ಧನ ಮಂಜೂರಾಗಿರುವ ಎಷ್ಟು ಸಣ್ಣ ಕೈಗಾರಿಕೆಗಳಿಗೆ ಸಹಾಯಧನ ಬಿಡುಗಡೆಯಾಗಿರುತ್ತದೆ?

ಈ) ಉಳಿಕೆ ಸಣ್ಣ ಕೈಗಾರಿಕೆಗಳಿಗೆ ಮಂಜೂರಾಗಿರುವ ಸಹಾಯ ಧನವನ್ನು ಯಾವಾಗ ಬಿಡುಗಡೆ ಮಾಡುತ್ತೀರಾ?

ಶ್ರೀ ಎಸ್. ಎಂ. ಯಾಹ್ಯ (ಕೈಗಾರಿಕಾ ಇಂಧನ ಹಾಗೂ ವಕ್ಫ್ ಸಚಿವರು).—

ಅ) ೧೯೮೮-೮೯	೧೧೫ ಘಟಕಗಳು
೧೯೮೯-೯೦	೧೧೬ ಘಟಕಗಳು
೧೯೯೦-೯೧	೨೬ ಘಟಕಗಳು
ಆ) ೧೯೮೮-೮೯	೪೫ ಘಟಕಗಳು
೧೯೮೯-೯೦	೨೨ ಘಟಕಗಳು
೧೯೯೦-೯೧	೨ ಘಟಕಗಳು

ಇ) ೧೯೮೨-೮೩ರಿಂದ ಮೇ ೧೯೯೦ರವರೆಗೆ ಒಟ್ಟು ೩೭೬ ಘಟಕಗಳಿಗೆ ಸಹಾಯಧನ ಮಂಜೂರಾಗಿದ್ದು, ಅದರಲ್ಲಿ ೩೩೫ ಘಟಕಗಳಿಗೆ ರೂ. ೯೫,೪೩,೧೪೮-೦೦ಗಳನ್ನು ಬಿಡುಗಡೆ ಮಾಡಲಾಗಿದೆ.

ಈ) ಮಂಜೂರಾಗಿ ಬಿಡುಗಡೆ ಮಾಡಬೇಕಾಗಿರುವ ಸಹಾಯ ಧನವನ್ನು ಜ್ಯೇಷ್ಠತೆ ಆಧಾರದ ಮೇಲೆ ವಿತರಣೆ ಮಾಡಲಾಗುವುದು.

ಶ್ರೀ ಎಂ. ತಮ್ಮಣ್ಣ.—ಅಧ್ಯಕ್ಷರೇ, ಬಹುತೇಕ, ಸಣ್ಣ ಕೈಗಾರಿಕೆಗಳು, ರಾಜ್ಯದ ಹಣಕಾಸು ಸಂಸ್ಥೆಯಿಂದ ಸಾಲ ಪಡೆಯುತ್ತಿವೆ. ಕೆ.ಎಸ್.ಎಫ್ ಸಿ. ರಾಜ್ಯ ಸರ್ಕಾರದ ಒಂದು ಸಂಸ್ಥೆ. ಈಗ ಏನಾಗಿದೆಯೊಂದರೆ ಒಂದು ಕಂತು ಕಟ್ಟದಿದ್ದರೂ ಬೀಗ ಹಾಕುತ್ತಾರೆ. ಆದ್ದರಿಂದ ಈ ಸಹಾಯಧನ ಏನು ಮಂಜೂರಾಗಿರುತ್ತದೆ. ಅಂತಹ ಕಡೆಗಳಿಗೆ ಸರ್ಕಾರ ಡೈರೆಕ್ಷನ್ ಕೊಡಬೇಕೆಂದು ತಮ್ಮ ಮೂಲಕ ಸಚಿವರಿಗೆ ಒತ್ತಾಯ ಮಾಡುತ್ತೇನೆ,

ಶ್ರೀ ಎಸ್. ಎಂ. ಯಹಾಹ್ಯಾ.—ಈ ಸಬ್ಸಿಡಿ ಮೊದಲೇ ಎಲ್ಲಾ ಕೊಡಬೇಕಾಗಿತ್ತು. ಮಂಡ್ಯ ಜಿಲ್ಲೆಯಲ್ಲಿ ಆಗಲಿ, ಇಡೀ ರಾಜ್ಯದಲ್ಲಿಯಾಗಲಿ ೧೯೮೬ರಿಂದ ಕೊಡದ ಕಾರಣ ಇಷ್ಟೆಲ್ಲಾ ಸಬ್ಸಿಡಿ ನಾವು ಕೊಡಬೇಕಾಗಿದೆ. ಅಂತೂ ಮಂಡ್ಯದಲ್ಲಿ ೩೦-೬-೧೯೯೦ರ ವರೆಗೆ ೧ ಕೋಟಿ ೩೧ ಲಕ್ಷ ರೂಪಾಯಿಗಳನ್ನು ಕೊಡಬೇಕಾಗಿತ್ತು. ನಾವು ೯೫ ಲಕ್ಷ ರೂಪಾಯಿಗಳನ್ನು ಕೊಟ್ಟಾಗಿದೆ. ಇಡೀ ರಾಜ್ಯದ್ದು ತೆಗೆದುಕೊಂಡರೆ, ನಾವು ಈಗ ಕೋಟ್ಯಾಂತರ ರೂಪಾಯಿಗಳನ್ನು ಕೊಟ್ಟಾಗಿದೆ ಹಾಗೂ ಕೊಡಲಿಕ್ಕೂ ಸ್ವಲ್ಪ ಬಾಕಿ ಇದೆ. ನಮಗೆ ಯಾವ ರೀತಿಯಲ್ಲಿ ಹಣಕಾಸು ಸಿಕ್ಕುತ್ತದೆ. ಅದರ ಪ್ರಕಾರ ಬೇಗನೆ ಕೊಡುವ ರೀತಿಯಲ್ಲಿ ನಾವು ಆದೇಶ ಸಹ ಕೊಡುತ್ತೇನೆ.

ಆಂಗ್ಲೋ ಇಂಡಿಯನ್‌ರ ಬಗ್ಗೆ

೧೪೩೦. ಶ್ರೀ ಡೆರಿಕ್ ಎಂ. ಬಿ. ಫುಲ್‌ಇನ್‌ಫಾ (ನಾಮ ನಿರ್ದೇಶನ ಹೊಂದಿದವರು)—ಮಾನ್ಯ ಸಮಾಜ ಕಲ್ಯಾಣ ಸಚಿವರ ಪರವಾಗಿ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಆಂಗ್ಲೋ ಇಂಡಿಯನ್ ಜನಾಂಗದವರ ದುರ್ಬರ ಬಡತನದ ಪರಿಸ್ಥಿತಿಯಂ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಆಂಗ್ಲೋ ಇಂಡಿಯನ್‌ರ ಜೀವನ ಮಟ್ಟವನ್ನು ಸುಧಾರಿಸಲು, ಅವರನ್ನು ಹಿಂದುಳಿದ ಜನಾಂಗದವರೆಂದು ಘೋಷಿಸಿ ಎಲ್ಲಾ ಸೌಲಭ್ಯಗಳನ್ನು ನೀಡಲು ಸರ್ಕಾರ ಯೋಚಿಸುವುದೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಕಾನೂನು ಸಂಸದೀಯ ವ್ಯವಹಾರ ಸಚಿವರು) (ಸಮಾಜ ಕಲ್ಯಾಣ ಸಚಿವರ ಪರವಾಗಿ)—

ಅ) ಬಂದಿದೆ.

ಆ) ಆಂಗ್ಲೋ ಇಂಡಿಯನ್‌ರ ವಾರ್ಷಿಕ ಆರ್ಥಿಕ ವರಮಾನವು ೮,೦೦೦-೦೦ ರೂ.ಗಳಿಗೆ ಕಡಿಮೆ ಇದ್ದಲ್ಲಿ ಹಿಂದುಳಿದ ವಿಶೇಷ ವರ್ಗ 'ಇ' ಗುಂಪಿಗೆ ಸಿಗುವ ವಿದ್ಯಾಭ್ಯಾಸದ ಮತ್ತು ನೌಕರಿಯ ಸವಲತ್ತುಗಳನ್ನು ಕೇಂದ್ರ ಸರ್ಕಾರಂತೆ ಭಾರತದ ಸಂವಿಧಾನದ ಅನುಚ್ಛೇದ ೧೫(೪) ಮತ್ತು ೧೬(೪)ರ ಅಡಿಯಲ್ಲಿ ಪಡೆಯಬಹುದಾಗಿದೆ.

MR. DERRICK M. B. FULLINFAW.—Sir, it is not enough that the Anglo-Indian Community is classified as Backward Community under Group-E Backward Special Group. I request that the Government classify Anglo-Indian Community as Backward Community in the regular group. I have already presented my Petition to the Backward Class Commission. I am sure that the Backward Class Commission has ignored the interest of the Anglo-Indian Community. Will the Government, therefore, Include the Anglo-Indian Community in Backward Community and set-right the injustice caused to this community ?

ಶ್ರೀ ಎಂ. ವೀರಪ್ಪ ಮೊಯಿಲಿ.— ಈಗ ಅನ್ಯಾಯವಾಗುತ್ತಿದೆಯೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅದನ್ನು ಸರಿಪಡಿಸತಕ್ಕಂಥಾದ್ದು ಈಗ ನನ್ನ ಕೈಯಲ್ಲಿ ಇಲ್ಲ, ನ್ಯಾಯಮೂರ್ತಿ ಚಿನ್ನಪ್ಪ ರೆಡ್ಡಿ ಆಯೋಗದ ವರದಿ ಸಚಿವ ಸಂಪುಟದ ಉಪ ಸಮಿತಿ ಮುಂದೆ ಇದೆ. ನಂತರ ಅದು ಸಚಿವ ಸಂಪುಟಕ್ಕೆ ಬರಬೇಕಾಗಿದೆ. ನಾವು ಇದರ ಬಗ್ಗೆ ಇನ್ನೂ ನಿರ್ಣಯ ತೆಗೆದುಕೊಂಡಿಲ್ಲ. ಆದುದರಿಂದ ಇದರ ಬಗ್ಗೆ ನಾನು ಆಶ್ವಾಸನೆ ಕೊಡುವುದಕ್ಕಾಗುವುದಿಲ್ಲ. ಈಗಿನ ಪರಿಸ್ಥಿತಿಯಲ್ಲಿ ಈಗ ಇರತಕ್ಕಂಥ ಸರಕಾರದ ಆದೇಶದ ಪ್ರಕಾರ ಆಂಗ್ಲೋ ಇಂಡಿಯನ್‌ರ ವಾರ್ಷಿಕ ವರಮಾನವು ಹತ್ತು ಸಾವಿರಕ್ಕಿಂಥ ಕಡಿಮೆ ಇದ್ದರೆ ಸಂವಿಧಾನದ ಆರ್ಟಿಕಲ್ ೧೬(೪)ರ ಪ್ರಕಾರ ಕ್ರಿಶ್ಚಿಯನ್ನರಿಗೆ ಸಿಗತಕ್ಕಂತಹ ಗ್ರೂಪ್ 'ಡಿ' ಸೌಲಭ್ಯವನ್ನು ಪಡೆಯಬಹುದು ಮಂತ್ತು ಆರ್ಟಿಕಲ್ ೧೫(೪) ಮತ್ತು ೧೬(೪)ರ ಪ್ರಕಾರ ೮ ಸಾವಿರಕ್ಕಿಂಥ ಆದಾಯ ಕಡಿಮೆಯಿದ್ದರೆ ಗ್ರೂಪ್ 'ಇ' ನಲ್ಲಿ ಆಂಗ್ಲೋ ಇಂಡಿಯನ್‌ರಿಗೆ ಸಿಗತಕ್ಕಂತಹ ಸೌಲಭ್ಯವನ್ನು ಪಡೆದುಕೊಳ್ಳಬಹುದು. ಈ ರೀತಿ ಎರಡು